# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ. ಸಿ. ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 314

ಉತ್ತರ ದಿನಾಂಕ : 07.07.2023

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಸರ್ಕಾರದ ಯೋಜನೆಯಾದ "ಜಲ್ ಜೀವನ್ ಮಿಷನ್" ಅಡಿಯಲ್ಲಿ ರಾಜ್ಯದಲ್ಲಿರುವ ಎಷ್ಟು ಮನೆಗಳಿಗೆ ನಲ್ಲಿ (ಕೊಳಾಯಿ) ಸಂಪರ್ಕದ ಮೂಲಕ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ; | "ಜಲ್ ಜೀವನ್ ಮಿಷನ್" ಅಡಿಯಲ್ಲಿ ರಾಜ್ಯದಲ್ಲಿನ ಒಟ್ಟು 101. 17 ಲಕ್ಷ ಗ್ರಾಮೀಣ ಮನೆಗಳಲ್ಲಿ ನಳ ಸಂಪರ್ಕವನ್ನು ಕಲ್ಪಿಸಲು ಯೋಜಿಸಲಾಗಿದ್ದು, ಯೋಜನೆ ಪ್ರಾರಂಭದಲ್ಲಿನ 24. 51 ಲಕ್ಷ ಗ್ರಾಮೀಣ ಮನೆಗಳ ಸಂಪರ್ಕವನ್ನು ಒಳಗೊಂಡಂತೆ ಇಲ್ಲಿಯವರೆಗೆ 69. 46 ಲಕ್ಷ ಗ್ರಾಮೀಣ ಮನೆಗಳಿಗೆ ನಳ ಸಂಪರ್ಕದ ಮೂಲಕ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗಿರುತ್ತದೆ. |
| ಆ) | ಈ ಯೋಜನೆಯಲ್ಲಿ ಉತ್ತಮ ಗುಣಮಟ್ಟದ ಕಾಮಗಾರಿಗಳು ನಡೆದಿವೆಯೇ; | ಜಲ್ ಜೀವನ್ ಮಿಷನ್ ಯೋಜನೆಯಡಿ ಉತ್ತಮ ಗುಣಮಟ್ಟದ ಕಾಮಗಾರಿಗಳು ನಡೆದಿವೆ. |
| ಇ) | ಸಂಬಂಧಪಟ್ಟ ಎಷ್ಟು ಜಿಲ್ಲೆ, ತಾಲ್ಲೂಕುಗಳಲ್ಲಿ ಸ್ಥಳ ಪರಿಶೀಲನೆ ಮಾಡಲಾಗಿದೆ; (ಪರಿಶೀಲಿಸಿದ ಅಧಿಕಾರಿಗಳ ವಿವರ ನೀಡುವುದು) | ಜಲ್ ಜೀವನ್ ಮಿಷನ್ ಯೋಜನೆಯಡಿ ರಾಜ್ಯದ ಎಲ್ಲಾ ಗ್ರಾಮಗಳಲ್ಲಿ ಕೈಗೆತ್ತಿಕೊಳ್ಳಲಾಗುತ್ತಿರುವ ಕಾಮಗಾರಿಗಳನ್ನು ಸಂಬಂಧಪಟ್ಟ ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸುತ್ತಿರುತ್ತಾರೆ.<br>ಅಂತೆಯೇ, ಸದರಿ ಯೋಜನೆಯಡಿ ಪ್ರತಿ ನಳ ಸಂಪರ್ಕ ಒದಗಿಸುವ ಕಾಮಗಾರಿಗಳನ್ನು ಜಿಲ್ಲಾಮಟ್ಟದಲ್ಲಿ empanel ಮಾಡಲಾದ 3ನೇ ವ್ಯಕ್ತಿ ತಪಾಸಣೆ ಸಂಸ್ಥೆಯಿಂದ ಪರಿಶೀಲಿಸಲಾಗುತ್ತಿದೆ ಹಾಗೂ ರಾಜ್ಯ ಮಟ್ಟದಲ್ಲಿ ರಾಜ್ಯ ಗುಣಮಟ್ಟ ಸಮಾಲೋಚಕರಿಂದ ಕಾಮಗಾರಿಗಳನ್ನು ಪರಿಶೀಲಿಸಲಾಗುತ್ತಿದೆ. |

| | | |
|---|---|---|
| ಈ) | ಈ ಯೋಜನೆಯ ಉಪಯೋಗದ ಬಗ್ಗೆ ವ್ಯಾಪಕ ಪ್ರಚಾರ ನೀಡಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ? | 1. ಈ ಯೋಜನೆ ಕುರಿತು ಗ್ರಾಮೀಣ ಜನರಿಗೆ ಮನಮುಟ್ಟುವ ರೀತಿಯಲ್ಲಿ ಮಾಹಿತಿಯನ್ನು ಒದಗಿಸಲು ಪತ್ರಿಕೆ, ಟಿವಿ ಚಾನೆಲ್‌ಗಳು, ಗೋಡೆ ಬರಹ, ಬೀದಿ ನಾಟಕ, ಘೋಷಣೆ, ಜಾಥಾ, ಕಿರುಚಿತ್ರಗಳ ಪ್ರದರ್ಶನ, ವಸ್ತು ಪ್ರದರ್ಶನ, ಆಟೋ ಪ್ರಚಾರ, ಜಾಹಿರಾತು ಫಲಕ, ಸಾಮಾಜಿಕ ಮಾಧ್ಯಮ ಮೂಲಕ ಪ್ರಚಾರ ಮಾಡುವುದು,<br>2. ಕಾರ್ಯಾಗಾರಗಳ ಆಯೋಜನೆ, ಶಾಲಾ ಮಕ್ಕಳಲ್ಲಿ ಜಾಗೃತಿ ಮೂಡಿಸಲು ಪ್ರಬಂಧ ಬರೆಯುವ ಮತ್ತು ಚಿತ್ರಕಲೆ ಬಿಡಿಸುವ ಸ್ಪರ್ಧೆ, ಚರ್ಚಾ ಸ್ಪರ್ಧೆ ಮತ್ತು ಅಂತರ್ಜಲ ಪುನರ್‌ಶ್ಚೇತನ ಕುರಿತು ವಿಶೇಷ ಆಂದೋಲನಗಳ ಆಯೋಜನೆ (ನೀರು ಸಂರಕ್ಷಣೆ), ಕಿರು ನೀರು ಮೂಲಗಳ ಪುನಶ್ಚೇತನ, ಸ್ವ-ಸಹಾಯ ಸಂಘ ಹಾಗೂ ಶಾಲಾ ಮಕ್ಕಳ ರ್‍ಯಾಲಿ/ಜಾಥಾ ಕಾರ್ಯಕ್ರಮ ಹಮ್ಮಿಕೊಂಡು ಅರಿವು ಮೂಡಿಸಲಾಗುತ್ತಿದೆ.<br>3. ಸಮುದಾಯ ರೇಡಿಯೋ ಕೇಂದ್ರಗಳು, ಆಕಾಶವಾಣಿ, ಡಿ.ಡಿ ಚಂದನ ಟಿ.ವಿ ಚಾನಲ್ ಮೂಲಕವು ಸಹ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. |

ಸಂ:ಗ್ರಾಕುನೀ&ನೈಇ/06/ಅಧೀಕ್ಷಕರು–01/2023

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು